ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರ ಶೂನ್ಯ ವೇಳೆ ಪ್ರಶ್ನೆಗೆ ಉತ್ತರ.

ವಿಷಯ:– 2009ನೇ ಸಾಲಿನಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಉಪನ್ಯಾಸಕರಾಗಿ ನೇಮಕಗೊಂಡು, ಬಿ.ಇಡಿ., ಪದವಿ ಪಡೆಯದವರಿಗೆ ಬಿ.ಇಡಿ., ಪದವಿ ಪಡೆಯಲು ವೇತನ ಸಹಿತ ರಜೆ ನೀಡಿ, 2 ವರ್ಷಗಳ ಕಾರ್ಯನಿರತ ಸೇವಾವಧಿಯೆಂದು ಪರಿಗಣಿಸಲಾಗಿರುತ್ತದೆ ಮತ್ತು ಜೆ.ಓ.ಸಿ.ಯಿಂದ ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ಬೋಧಕರಾಗಿ ವಿಲೀನಗೊಂಡಿರುವರಿಗೆ ಬಿ.ಇಡಿ., ಪದವಿ ಪಡೆಯಲು ಸಂಚಿತ ವೇತನ ಸಹಿತ ರಜೆ ನೀಡಿ ಅವಕಾಶ ಕಲ್ಪಿಸಲಾಗಿರುವುದು ಸ್ವಾಗತಾರ್ಹ. ಆದರೆ, 2013ನೇ ಸಾಲಿನಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಉಪನ್ಯಾಸಕರಾಗಿ ನೇಮಕಗೊಂಡವರಿಗೆ ಬಿ.ಇಡಿ., ಪದವಿ ಪಡೆಯಲು ಸಂಚಿತ ವೇತನ ನೀಡಿ, ಡೈಸ್–ನಾನ್ ಎಂದು ಆದೇಶಿಸಿ, ಬಿ.ಇಡಿ., ಪದವಿ ವ್ಯಾಸಂಗಕ್ಕೆ ಕಳುಹಿಸಿಕೊಡಲಾಯಿತು. ಬಿ.ಇಡಿ., ಪದವಿ ಪಡೆದ ನಂತರ ಡೈಸ್–ನಾನ್ ತೆರವುಗೊಳಿಸಿ, 2 ವರ್ಷ ಕಾರ್ಯನಿರತ ಸೇವಾವಧಿಯೆಂದು ಪರಿಗಣಿಸುವಂತೆ ಮಾನ್ಯ ಶಾಸಕರು, ಸಂಘಟನೆಯ ಪ್ರತಿನಿಧಿಗಳ ಒತ್ತಾಯದ ಮೇರೆಗೆ ದಿನಾಂಕ: 15–9–2017ರಂದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಯುತ ಸಿದ್ದರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಡೈಸ್–ನಾನ್ ಅನ್ನು ಕೈಬಿಟ್ಟು, 2 ವರ್ಷ ಕಾರ್ಯನಿರತ ಅವಧಿಯನ್ನು ಸೇವಾವಧಿಯೆಂದು ಪರಿಗಣಿಸುವಂತೆ ನಿರ್ಣಯಿಸಲಾಯಿತು. ಅಧಿಕಾರಿಗಳು ನಡವಳಿಗಳನ್ನು ತಯಾರಿಸುವಾಗ ತಪ್ಪಾಗಿ ನಮೂದಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 112(9)ರ ಉಪ ನಿಯಮಗಳ ಮೇರೆಗೆ ಮಂಜೂರು ಮಾಡಬಹುದಾದ ಗರಿಷ್ಠ ಅವಧಿ 120 ದಿನಗಳ ಗಳಿಕೆ ರಜೆ ಮೀರದಂತೆ ಅವರ ಹಕ್ಕಿನಲ್ಲಿರುವ ರಜೆ ಮಂಜೂರು ಮಾಡಲು ಮತ್ತು ಬಾಕಿ ಉಳಿದಿರುವ ಅವಧಿಗೆ ವೇತನ ರಹಿತ ರಜೆ ಎಂದು ಪರಿಗಣಿಸಲು ಆದೇಶಿಸಲಾಗಿರುವುದರಿಂದ, 2 ವರ್ಷಗಳ ಅವಧಿಯನ್ನು ಕಾರ್ಯನಿರತ ಸೇವಾವಧಿಯೆಂದು ಪರಿಗಣಿಸಲಾಗುತ್ತಿಲ್ಲ. ಇದರಿಂದಾಗಿ 11 ವರ್ಷಗಳ ಸೇವೆ ಪೂರೈಸಿದರೂ ಸದರಿ ಉಪನ್ಯಾಸಕರಿಗೆ 10 ವರ್ಷಗಳ ಕಾಲಮಿತಿ ವೇತನ ಬಡ್ತಿಯನ್ನು ಕಲ್ಪಿಸಲಾಗಿರುವುದಿಲ್ಲ. ಈ ಸಂಬಂಧ 4 ಪತ್ರಗಳನ್ನು ಬರೆದರೂ ಸಹ ಇಲಾಖೆ ಯಾವುದೇ ಕ್ರಮ ವಹಿಸದೆ ಇರುವುದು ತುಂಬಾ ವಿಷಾದನೀಯ ಸಂಗತಿ.

2009ನೇ ಸಾಲಿನ ಹಾಗೂ ಜೆ.ಓ.ಸಿ ಉಪನ್ಯಾಸಕರನ್ನು ಬಿ.ಇಡಿ., ಪದವಿ ವ್ಯಾಸಂಗಕ್ಕೆ 2 ವರ್ಷ ಕಾರ್ಯನಿರತ ಸೇವಾವಧಿ ಎಂದು ಪರಿಗಣಿಸಿದಂತೆ ಹಾಗೂ ಮಾನ್ಯ ಮುಖ್ಯಮಂತ್ರಿಗಳ ದಿನಾಂಕ: 15–9–2017ರ ಸಭೆಯ ತೀರ್ಮಾನದಂತೆ ಸದರಿಯವರಿಗೆ 10 ವರ್ಷಗಳ ಕಾಲಮಿತಿ ವೇತನ ಬಡ್ತಿಯನ್ನು ಹಾಗೂ ಅರ್ಹ ಎಲ್ಲಾ ಸೌಲಭ್ಯಗಳನ್ನು ಕೂಡಲೇ ನೀಡಬೇಕೆಂದು ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರನ್ನು ಒತ್ತಾಯಿಸುತ್ತೇನೆ.

ಉತ್ತರ:–

ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 145 ಡಿಜಿಓ 2007 ದಿನಾಂಕ:04–02–2008ರಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತರಲಾದ ತಿದ್ದುಪಡಿ ನಿಯಮಗಳಲ್ಲಿ ಉಪನ್ಯಾಸಕರ ವೃಂದದ ನೇಮಕಾತಿಗೆ ದ್ವಿತೀಯ ದರ್ಜೆ ಸ್ನಾತಕೋತ್ತರ ಪದವಿಯ ಜೊತೆಗೆ ಬಿ.ಇಡಿ ಪದವಿಯ ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿತ್ತು. ಸದರಿ ನಿಯಮಗಳು ಜಾರಿಗೆ ಬಂದ ನಾಲ್ಕು ವರ್ಷಗಳೊಳಗೆ ಬಿ.ಇಡಿ ಪದವಿಯನ್ನು ಹೊಂದುವ ಷರತ್ತಿನೊಂದಿಗೆ ಬಿ.ಇಡಿ ಪದವಿ ಹೊಂದದ ಸ್ನಾತಕೋತ್ತರ ಪದವೀಧರರನ್ನು ಉಪನ್ಯಾಸಕರ ನೇಮಕಾತಿಯಲ್ಲಿ ಪರಿಗಣಿಸಲು ದಿನಾಂಕ:04–02–2008ರ ತಿದ್ದುಪಡಿ ನಿಯಮದಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಅದರಂತೆ 2009–10ನೇ ಸಾಲಿನಲ್ಲಿ ನೇಮಕಗೊಂಡ ಸುಮಾರು 1347 ಉಪನ್ಯಾಸಕರು ಬಿ.ಇಡಿ ಪದವಿಯನ್ನು ಹೊಂದಿರಲಿಲ್ಲ. ಈ ಉಪನ್ಯಾಸಕರಿಗೆ ಬಿ.ಇಡಿ. ಪದವಿಯನ್ನು ಹೊಂದಲು ಸರ್ಕಾರದ ಆದೇಶ ಸಂಖ್ಯೆ: ಇಡಿ 148 ಡಿಜಿಡಿ 2012 ದಿನಾಂಕ: 13/02/2014ರಲ್ಲಿ ವೇತನಸಹಿತ ನಿಯೋಜನೆ ಮಾಡಲು ಅವಕಾಶ ಕಲ್ಪಿಸಲಾಗಿದೆ.

2011ರ ವಿಶೇಷ ನೇಮಕಾತಿ ನಿಯಮಗಳಡಿ 2013ನೇ ಸಾಲಿನಲ್ಲಿ ನೇಮಕ ಮಾಡಿಕೊಳ್ಳಲಾದ ಉಪನ್ಯಾಸಕರ ಪೈಕಿ ಬಿ.ಇಡಿ ಪದವಿ ಹೊಂದಿಲ್ಲದ 736 ಉಪನ್ಯಾಸಕರನ್ನು ಬಿ.ಇಡಿ ಪದವಿ ಹೊಂದಲು ರೂ. 24,000/-ಗಳ ಮಾಸಿಕ ಶಿಷ್ಯ ವೇತನದೊಂದಿಗೆ ಬಿ.ಇಡಿ ಪದವಿ ಹೊಂದಲು ಸರ್ಕಾರದ ಪತ್ರ ಸಂಖ್ಯೆ: ಇಡಿ 189 ಟಿಪಿಯು 2015 ದಿನಾಂಕ: 28-12-2016 ಮತ್ತು ಸರ್ಕಾರದ ಆದೇಶ ಸಂಖ್ಯೆ: ಇಡಿ 189 ಟಿಪಿಯು 2015 ದಿನಾಂಕ :01-07-2017ರಲ್ಲಿ ಅವಕಾಶ ಕಲ್ಪಿಸಲಾಗಿದೆ. ಪ್ರೊಬೇಷನರಿ ಅವಧಿಯಲ್ಲಿ ವೇತನ ಸಹಿತ ರಜೆಗೆ ಅವಕಾಶವಿರುವುದಿಲ್ಲವಾದ್ದರಿಂದ ಬಿ.ಇಡಿ ಪದವಿ ವ್ಯಾಸಂಗದ ಅವಧಿಯನ್ನು ಡೈಸ್ ನಾನ್ (Dies non) ಮತ್ತು ವೇತನರಹಿತ ಅವಧಿ ಎಂದು ಪರಿಗಣಿಸಿ ಆದೇಶಿಸಲಾಗಿತ್ತು.

ತದನಂತರ, ಅಂದಿನ ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ದಿನಾಂಕ: 15-09-2017 ಹಾಗೂ ದಿನಾಂಕ: 27-09-2017ರಂದು ನಡೆದ ಸಭೆಯ ನಿರ್ಣಯದಂತೆ 2013ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಾಗಿ ನೇಮಕಗೊಂಡು ಬಿ.ಇಡಿ. ಪದವಿ ಹೊಂದಲು ನಿಯೋಜನೆಗೊಂಡಿರುವ ಉಪನ್ಯಾಸಕರಿಗೆ ಡೈಸ್-ನಾನ್ ಷರತ್ತನ್ನು ತೆಗೆದುಹಾಕುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹಾಗೂ ಆರ್ಥಿಕ ಇಲಾಖೆಯ ಅಭಿಪ್ರಾಯ/ಸಹಮತಿಯನ್ನು ಪಡೆದು, ಸರ್ಕಾರದ ಆದೇಶ ಸಂಖ್ಯೆ: ಇಡಿ 189 ಟಿಪಿಯು 2015 ದಿನಾಂಕ: 03-10-2018ರಲ್ಲಿ 2013ನೇ ಸಾಲಿನಲ್ಲಿ ಬಿ.ಇಡಿ. ಪದವಿಯನ್ನು ಹೊಂದಿಲ್ಲದೆ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ನೇಮಕಗೊಡಿರುವ ಉಪನ್ಯಾಸಕರುಗಳು ಬಿ.ಇಡಿ. ಪದವಿ ಶಿಕ್ಷಣ ಪಡೆಯುವ ಅವಧಿಯನ್ನು ಡೈಸ್-ನಾನ್(Dies non) ಎಂದು ಪರಿಗಣಿಸಲು ವಿಧಿಸಿರುವ ಷರತ್ತನ್ನು ತೆಗೆದು ಹಾಕಿ, ಸದರಿ ಅವಧಿಯನ್ನು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 112(9)ರ ಉಪ ನಿಯಮಗಳ ಮೇರೆಗೆ ಮಂಜೂರು ಮಾಡಬಹುದಾದ ಗರಿಷ್ಠ ಅವಧಿ 120 ದಿನಗಳ ಗಳಿಕೆ ರಜೆ ಮೀರದಂತೆ ಅವರ ಹಕ್ಕಿನಲ್ಲಿರುವ ರಜೆ ಮಂಜೂರು ಮಾಡಲು ಮತ್ತು ಬಾಕಿ ಉಳಿದಿರುವ ಅವಧಿಗೆ ವೇತನ ರಹಿತ ರಜೆ ಎಂದು ಪರಿಗಣಿಸಲು ಆದೇಶಿಸಲಾಗಿದೆ.

ಮೇಲಿನಂತೆ ಅಂದಿನ ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:15-09-2017 ಹಾಗೂ ದಿನಾಂಕ: 27-09-2017ರಂದು ನಡೆದ ಸಭೆಯ ನಿರ್ಣಯದಂತೆ ಬಿ.ಇಡಿ. ಪದವಿಯನ್ನು ಹೊಂದಿಲ್ಲದೆ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ನೇಮಕಗೊಂಡಿರುವ ಉಪನ್ಯಾಸಕರುಗಳು ಬಿ.ಇಡಿ. ಪದವಿ ಶಿಕ್ಷಣ ಪಡೆಯುವ ಅವಧಿಯನ್ನು ಡೈಸ್-ನಾನ್ (Dies non) ಎಂದು ಪರಿಗಣಿಸಲು ವಿಧಿಸಿರುವ ಷರತ್ತನ್ನು ತೆಗೆದು ಹಾಕಿ, ಸದರಿ ಅವಧಿಯನ್ನು ಗರಿಷ್ಟ ಅವಧಿ 120 ದಿನಗಳ ಗಳಿಕೆ ರಜೆ ಮೀರದಂತೆ ಅವರ ಹಕ್ಕಿನಲ್ಲಿರುವ ರಜೆಯನ್ನು ಮಂಜೂರು ಮಾಡಲು ಮತ್ತು ಬಾಕಿ ಉಳಿದಿರುವ ಅವಧಿಗೆ ವೇತನ ರಹಿತ ರಜೆ ಎಂದು ಪರಿಗಣಿಸಿ ಈಗಾಗಲೇ ಸ್ಪಷ್ಟಪಡಿಸಿ ಆದೇಶಿಸಲಾಗಿದೆ.

**ಕಾಲಮಿತಿ ವೇತನ ಬಡ್ತಿಯನ್ನು ಮಂಜೂರು ಮಾಡುವ ಕುರಿತಂತೆ ಕಾಲಮಿತಿ ಮುಂಬಡ್ತಿ ನಿಯಮಗಳು 1983ರನ್ವಯ ವೇತನ ರಹಿತ ರಜೆಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸಲು ಅವಕಾಶವಿರುವುದಿಲ್ಲ. ಸದರಿ ಉಪನ್ಯಾಸಕರುಗಳ ಕಾಲಮಿತಿ ವೇತನ ಬಡ್ತಿಯು ಅವರುಗಳ ವೇತನ ರಹಿತ ರಜೆ ಪಡೆದಿರುವಷ್ಟು ದಿನಗಳು ನಿಯಮಾನುಸಾರ ಮುಂದೂಡಲ್ಪಡುತ್ತದೆ. ಈ ರೀತಿಯಾಗಿ ಕಾಲಬದ್ಧ ಮುಂಬಡ್ತಿ ನಿಯಮಗಳ ಅನುಸಾರ ಮುಂದೂಡಲ್ಪವಷ್ಟು ದಿನಗಳನ್ನು ಲೆಕ್ಕಹಾಕಿ ಅಷ್ಟೂ ದಿನಗಳನ್ನು ಮುಂದೂಡಿ ಕಾಲಮಿತಿ ವೇತನ ಬಡ್ತಿಯನ್ನು ಮಂಜೂರು ಮಾಡಲಾಗುತ್ತಿದೆ.**

**ಸಂಖ್ಯೆ: ಇಪಿ 232 ಡಿಜಿಡಬ್ಲ್ಯೂ 2023**

(ಎಸ್. ಮಧು ಬಂಗಾರಪ್ಪ)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.